# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 678
2) ಸದಸ್ಯರ ಹೆಸರು : ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು)
3) ಉತ್ತರಿಸಬೇಕಾದ ದಿನಾಂಕ : 12-07-2023
4) ಉತ್ತರಿಸಬೇಕಾದ ಸಚಿವರು : ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕೇಂದ್ರದ ನೀಲಿಕ್ರಾಂತಿ ಯೋಜನೆ ಅಡಿ ಅಭಿವೃದ್ಧಿ ಗೊಳಿಸುತ್ತಿರುವ ಮೀನುಗಾರಿಕೆ ಬಂದರು ಮತ್ತು ಮೀನು ಲ್ಯಾಂಡಿಂಗ್ ಕೇಂದ್ರಗಳು ಯಾವುವು;<br>(ವರ್ಷವಾರು ಪೂರ್ಣ ಮಾಹಿತಿ ನೀಡುವುದು) | ರಾಜ್ಯದಲ್ಲಿ ಕೇಂದ್ರ ಸರ್ಕಾರದ ನೀಲಿಕ್ರಾಂತಿ ಯೋಜನೆಯಡಿ ಅಭಿವೃದ್ಧಿಗೊಳಿಸುತ್ತಿರುವ ಮೀನುಗಾರಿಕೆ ಬಂದರು ಮತ್ತು ಮೀನು ಲ್ಯಾಂಡಿಂಗ್ ಇಳಿದಾಣ ಕೇಂದ್ರಗಳ ವಿವರ ಈ ಕೆಳಗಿನಂತಿದೆ:<br>1) ಉತ್ತರ ಕನ್ನಡ ಜಿಲ್ಲೆ, ಭಟ್ಕಳ ತಾಲ್ಲೂಕಿನ ಅಳ್ವೇಕೋಡಿ ತೆಂಗಿನಗುಂಡಿಯಲ್ಲಿ ಅಲೆ ತಡೆಗೋಡೆಯ ನಿರ್ಮಾಣ 2017-18ನೇ ಸಾಲಿನಲ್ಲಿ ಮಂಜೂರಾಗಿ ಕಾಮಗಾರಿ ಪೂರ್ಣಗೊಂಡಿದೆ.<br>2) ಉಡುಪಿ ಜಿಲ್ಲೆ, ಕಾಪು ತಾಲ್ಲೂಕು ಹೆಜಮಾಡಿ ಕೋಡಿಯಲ್ಲಿ ನೂತನ ಮೀನುಗಾರಿಕೆ ಬಂದರು ನಿರ್ಮಾಣದ ಕಾಮಗಾರಿ 2018-19ನೇ ಸಾಲಿನಲ್ಲಿ ಮಂಜೂರಾಗಿ ಪ್ರಸ್ತುತ ಪ್ರಗತಿಯಲ್ಲಿದೆ<br>3) ದಕ್ಷಿಣ ಕನ್ನಡ ಜಿಲ್ಲೆ ಕುಳಾಯಿಯಲ್ಲಿ ಮೀನುಗಾರಿಕೆ ಬಂದರಿನ ಅಭಿವೃದ್ಧಿ ಕಾಮಗಾರಿ 2017-18ರಲ್ಲಿ ಮಂಜೂರಾಗಿ ಪ್ರಸ್ತುತ ಪ್ರಗತಿಯಲ್ಲಿದೆ. |
| ಆ) | ರಾಜ್ಯ ಸರ್ಕಾರ ಈ ಯೋಜನೆ ಅಡಿಯಲ್ಲಿ ಇದುವರೆಗೂ ಖರ್ಚು ಮಾಡಿರುವ ಹಣ ಎಷ್ಟು ಮತ್ತು ಇದರಲ್ಲಿ ಕೇಂದ್ರ ಸರ್ಕಾರದ ಪಾಲು ಎಷ್ಟು;<br>(ಪೂರ್ಣ ಮಾಹಿತಿ ನೀಡುವುದು) | ಕೇಂದ್ರ ಪುರಸ್ಕೃತ ನೀಲಿಕ್ರಾಂತಿ ಯೋಜನೆ ಯಡಿ ಮೇಲಿನ ಕಾಮಗಾರಿಗಳಿಗೆ ಇದುವರೆವಿಗೂ ಖರ್ಚು ಆದ ಮೊತ್ತ ರೂ.16016.18 ಲಕ್ಷಗಳು ಮತ್ತು ಇದರಲ್ಲಿ ಕೇಂದ್ರ ಸರ್ಕಾರದ ಪಾಲು ರೂ. 7320.59 ಲಕ್ಷಗಳು. ವಿವರಗಳನ್ನು **<u>ಅನುಬಂಧ</u>**ದಲ್ಲಿ ನೀಡಲಾಗಿದೆ. |
| ಇ) | ರಾಜ್ಯದಲ್ಲಿ ಈ ಯೋಜನೆ ಅಡಿ ಸ್ಥಳೀಯರಿಗೆ ಉದ್ಯೋಗ ಅವಕಾಶ ದೊರಕಿಸಿ ಕೊಡಲಾಗಿದೆಯೇ? (ಹಾಗಿದ್ದಲ್ಲಿ, ಪೂರ್ಣ ಮಾಹಿತಿ ನೀಡುವುದು) | ಸದರಿ ಯೋಜನೆಗಳ ಅನುಷ್ಠಾನದಿಂದ ಮೀನುಗಾರಿಕೆ ಬಂದರುಗಳಲ್ಲಿ ಕಾವಲುಗಾರರು, ವಿವಿಧ ಮಳಿಗೆಗಳ ವ್ಯಾಪಾರಸ್ಥರು, ಮೀನು ವ್ಯಾಪಾರಸ್ಥರು, ಮತ್ತು ಇಲ್ಲಿ ಕೂಲಿ ಮಾಡುವ ಬಹುತೇಕ ಜನರು ಸ್ಥಳೀಯರಾಗಿರುತ್ತಾರೆ ಹಾಗೂ ಈ ಮೀನುಗಾರಿಕೆ ಬಂದರುಗಳನ್ನು ಉಪಯೋಗಿಸುವ ಬಹುತೇಕ ಮೀನುಗಾರರು ಸಹ ಸ್ಥಳೀಯರಾಗಿರುತ್ತಾರೆ. ಆದುದರಿಂದ, ಸದರಿ ಯೋಜನೆಗಳಿಂದ ಸ್ಥಳೀಯರಿಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಉದ್ಯೋಗ ಅವಕಾಶ ದೊರಕುತ್ತದೆ. |

ಸಂಖ್ಯೆ: ಪಸಂಮೀ ಇ-106 ಮೀಇಯೋ 2023

(ಮಂಕಾಳ ಎಸ್. ವೈದ್ಯ)
ಮೀನುಗಾರಿಕೆ, ಬಂದರು ಮತ್ತು
ಒಳನಾಡು ಜಲಸಾರಿಗೆ ಸಚಿವರು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ.ಎ. ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 678 ಕ್ಕೆ**

**ಅನುಬಂಧ**

| ಕ್ರ. ಸಂ. | ಕಾಮಗಾರಿ | ಮಂಜೂರಾದ ಮೊತ್ತ | ವೆಚ್ಚ (ರೂ. ಲಕ್ಷಗಳಲ್ಲಿ) | | |
|---|---|---|---|---|---|
| | | | ರಾಜ್ಯ | ಕೇಂದ್ರ | ಒಟ್ಟು |
| 1 | ಉತ್ತರ ಕನ್ನಡ ಜಿಲ್ಲೆ, ಭಟ್ಕಳ ತಾಲ್ಲೂಕಿನ ಅಳ್ವೇಕೋಡಿ ತೆಂಗಿನ ಗುಂಡಿಯಲ್ಲಿ ಅಲೆ ತಡೆಗೋಡೆಯ ನಿರ್ಮಾಣ | 8608.00 | 3769.59 | 3769.59 | 7539.18 |
| 2 | ಉಡುಪಿ ಜಿಲ್ಲೆ, ಕಾಪು ತಾಲ್ಲೂಕು ಹೆಜಮಾಡಿ ಕೋಡಿಯಲ್ಲಿ ನೂತನ ಮೀನುಗಾರಿಕೆ ಬಂದರು ನಿರ್ಮಾಣ | 18873.00 | 4885.00 | 2772.00 | 7657.00 |
| 3 | ದಕ್ಷಿಣ ಕನ್ನಡ ಜಿಲ್ಲೆ ಕುಳಾಯಿಯಲ್ಲಿ ಮೀನುಗಾರಿಕೆ ಬಂದರಿನ ಅಭಿವೃದ್ಧಿ ಕಾಮಗಾರಿ | 19651.00 | 41.00 | 779.00 | 820.00 |
| | **ಒಟ್ಟು** | **47132.00** | **8695.59** | **7320.59** | **16016.18** |

*******